## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 163, ಕತ್ರಿಗುಪ್ಪೆ, ಬೆಂಗಳೂರು.

### ಏಪ್ರಿಲ್ ಮಾಹೆಯ 1ನೇ ವಾರ್ಡ್ ಸಮಿತಿ ಸಭೆಯ ನಡವಳಿಗಳು

***********

ವಿಷಯ: ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020-21. ದಿನಾಂಕ: 21-09-2020ರ ಆದೇಶದಂತೆ ವಾರ್ಡ್ ಸಂಖ್ಯೆ: 163, ಕತ್ರಿಗುಪ್ಪೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

*****

ದಿನಾಂಕ: 05-04-2021

ಸ್ಥಳ : ಬಿಬಿಎಂಪಿ ವಿವಿಧೋದ್ದೇಶ ಕಟ್ಟಡ, ಶ್ರೀಕಂಠೇಶ್ವರ ಪಾರ್ಕ್ ಹತ್ತಿರ

ಸಮಯ : ಬೆಳಿಗ್ಗೆ 11.00 ಗಂಟೆಗೆ

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ದಯಾನಂದ್ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ ಜನಾರ್ಧನ್ .ಪಿ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗಿರಿನಗರ ಉಪವಿಭಾಗ |
| 3 | ಶ್ರೀಮತಿ ಶ್ವೇತಾ .ಬಿ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್ 163, ಕತ್ರಿಗುಪ್ಪೆ |
| 4 | ಶ್ರೀ ಗಂಗಾಧರ್ | ಕಂದಾಯ ವಸೂಲಿಗಾರರು, ವಾರ್ಡ್ ನಂ. 163 |
| 5 | ಶ್ರೀ ಉಮೇಶ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-163 |
| 6 | ಶ್ರೀ ರವಿಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 163 |
| 7 | ಶ್ರೀ ಪ್ರದೀಪ್ | ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 163 |
| 8 | ಶ್ರೀ ಡಿ.ಸಿ ಚಂದ್ರಪ್ಪ | ಎ.ಎಸ್.ಐ, ಸಿ.ಕೆ ಅಚ್ಚುಕಟ್ಟು ಪೋಲೀಸ್ ಠಾಣೆ |
| 9 | ಶ್ರೀ ವೆಂಕಟೇಶ್ .ಪಿ | ಸೆಕ್ಟರ್ ಆಫೀಸರ್, ವಾರ್ಡ್ ನಂ. 163 |
| 10 | ಶ್ರೀ ಸುದರ್ಶನ್ | ಬಿ.ಎಲ್.ಓ ವಾರ್ಡ್ ನಂ. 163 |
| 11 | ಶ್ರೀ ಶಂಕರಯ್ಯ | ಬಿ.ಎಲ್.ಓ ವಾರ್ಡ್ ನಂ. 163 |

ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳಾದ ಶ್ರೀ ದಯಾನಂದ್ ರವರು ಸ್ವ ಪರಿಚಯ ಮಾಡಿಕೊಂಡು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಕತ್ರಿಗುಪ್ಪೆ ವಾರ್ಡ್-163ರ ವ್ಯಾಪ್ತಿಯಲ್ಲಿ ಆರೋಗ್ಯ ವೈದ್ಯಾಧಿಕಾರಿಗಳು ಪ್ರತಿ ದಿನ ಸುಮಾರು 120 ಕೋವಿಡ್-19 ಪರೀಕ್ಷೆಗಳನ್ನು ಮಾಡಿರುತ್ತಾರೆ. ಪಾಸಿಟಿವ್ ಪ್ರಕರಣಗಳು ಪತ್ತೆಯಾಗಿದ್ದಲ್ಲಿ ಅವುಗಳಿಗೆ Primary Contacts & secondary Contacts ಕೋವಿಡ್-19 ಪರೀಕ್ಷೆಗಳನ್ನು ಕೈಗೊಳ್ಳಲಾಗಿರುತ್ತದೆ. ಕೋವಿಡ್-19 ಲಸಿಕೆ ನೀಡುವ ಕಾರ್ಯಕ್ರಮವು ಸಮರ್ಪಕವಾಗಿ ನಡೆಯುತ್ತಿದೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

2. ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಜಾಸ್ತಿಯಾಗುತ್ತಿರುವ ಹಿನ್ನಲೆಯಲ್ಲಿ ಶ್ರೀನಿವಾಸನಗರ, 43 ಎ ಬಸ್ ನಿಲ್ದಾಣ ಮತ್ತು ಕಮರ್ಷಿಯಲ್ ಕಾಂಪ್ಲೆಕ್ಸ್ ಇಲ್ಲಿ ಸಂಚಾರಿ ಟೆಸ್ಟಿಂಗ್ ಸೆಂಟರ್‌ನ್ನು (ಮೊಬೈಲ್ ಯೂನಿಟ್) ಅಳವಡಿಸಿ ಹೆಚ್ಚು ಸಂಖ್ಯೆಯಲ್ಲಿ ಕೋವಿಡ್-19 ಪರೀಕ್ಷೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ.



Scanned with CamScanner

3. ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಜಾಸ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಲಸಿಕೆ ಹಾಕಿಸಿಕೊಳ್ಳಲು ಅರಿವು ಮೂಡಿಸುವ ಸಲುವಾಗಿ ಸಾರ್ವಜನಿಕರು ಹೆಚ್ಚಾಗಿ ಓಡಾಡುವ ಪ್ರದೇಶಗಳಲ್ಲಿ ಹಾಗೂ ಬಸ್‌ನಿಲ್ದಾಣಗಳಲ್ಲಿ ಕೋವಿಡ್-19 ಲಸಿಕೆ ಜಾಹಿರಾತು ಬ್ಯಾನರ್‌ಗಳನ್ನು ಹಾಕುವುದು ಅವಶ್ಯಕವಾಗಿರುತ್ತದೆ ಎಂದು ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ.
4. ಕತ್ರಿಗುಪ್ಪೆ ವಾರ್ಡ್-163ರ ವ್ಯಾಪ್ತಿಯಲ್ಲಿ ಈಗಾಗಲೇ ಅಳವಡಿಸಿರುವ ಸಿ.ಸಿ. ಟಿ.ವಿ ಕ್ಯಾಮರಾಗಳ ಕಾರ್ಯನಿರ್ವಹಣೆಯ ಬಗ್ಗೆ ಮಾಹಿತಿ, ಹೊಸದಾಗಿ ಸಿ.ಸಿ. ಟಿ.ವಿ ಕ್ಯಾಮರಾಗಳನ್ನು ಅಳವಡಿಸಲು ಅವಶ್ಯವಿರುವ ಪ್ರದೇಶಗಳ ಮಾಹಿತಿ, ಮತ್ತು ಅವಶ್ಯವಿರುವ ಒಟ್ಟು ಸಿ.ಸಿ. ಟಿ.ವಿ ಕ್ಯಾಮರಾಗಳ ಮಾಹಿತಿಯನ್ನು ನೀಡಲು ಸಭೆಯಲ್ಲಿ ಸೂಚಿಸಲಾಯಿತು.
5. ಕತ್ರಿಗುಪ್ಪೆ ವಾರ್ಡ್-163ರ ರಾಮರಾವ್ ಬಡಾವಣೆಯಲ್ಲಿ ಧೀರ್ಘಕಾಲದಿಂದ ವಾಹನಗಳನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿರುವುದು ಕಂಡುಬಂದಿದ್ದು, ಸದರಿ ವಾಹನಗಳನ್ನು ಕೂಡಲೇ ತೆರವುಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಯಿತು.
6. ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಉದ್ಯಾನವನಗಳಲ್ಲಿ ಹಾಗೂ ಮೈದಾನಗಳಲ್ಲಿ ಮಾಸ್ಕ್ ಧರಿಸದಿರುವವರಿಗೆ ದಂಡ ವಿಧಿಸಲು ಪೋಲೀಸರನ್ನು ನೇಮಕ ಮಾಡುವಂತೆ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳಿಗೆ ತಿಳಿಸಲಾಯಿತು.
7. ಕತ್ರಿಗುಪ್ಪೆ ವಾರ್ಡ್-163ರ ವ್ಯಾಪ್ತಿಯಲ್ಲಿ ಮಾರ್ಷಲ್‌ಗಳು ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸಿ ಸದರಿ ಪ್ರದೇಶದಲ್ಲಿ ಪೈಂಟಿಂಗ್ ಮಾಡಿ ಅಲಂಕೃತಗೊಳಿಸುವ ಮೂಲಕ ಕಸ ಸಂಗ್ರಹಣೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕ್ರಮಕೈಗೊಳ್ಳಲಾಯಿತು ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.
8. ವಾರ್ಡ್ ವ್ಯಾಪ್ತಿಯ ಹೋಟೆಲ್ / ರೆಸ್ಟೋರೆಂಟ್‌ಗಳಲ್ಲಿ ಬಳಸಿ ಎಸೆಯುವ ಪ್ಲೇಟ್ ಮತ್ತು ಗ್ಲಾಸ್‌ಗಳನ್ನು ಉಪಯೋಗಿಸಲು ಹಾಗೂ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಲು ಅರಿವು ಮೂಡಿಸಲು ಮಾರ್ಷಲ್‌ಗಳಿಗೆ ತಿಳಿಸಲಾಯಿತು.
9. ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಜಾಸ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಲ್ಲಿ ಸಾಮಾಜಿಕ ಅಂತರ ಕಾಪಾಡಿಕೊಳ್ಳಲು, ಸ್ಯಾನಿಟೈಸರ್ ಮೂಲಕ ಕೈಗಳನ್ನು ಸ್ವಚ್ಛಗೊಳಿಸುವುದು ಮತ್ತು ಮಾಸ್ಕ್ ಧರಿಸುವುದರ ಬಗ್ಗೆ ಅರಿವು ಮೂಡಿಸಲು ಹಾಗೂ ಮಾಸ್ಕ್ ಧರಿಸದಿರುವವರಿಗೆ ದಂಡ ವಿಧಿಸಲು ಮಾರ್ಷಲ್‌ಗಳಿಗೆ ತಿಳಿಸಲಾಯಿತು.

ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 163, ಕತ್ರಿಗುಪ್ಪೆ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 163, ಕತ್ರಿಗುಪ್ಪೆ

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎಸ್. ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾನಿ) ರವರ ಮಾಹಿಗಾಗಿ ಸಲ್ಲಿಸಿದೆ.
4. ಮಾನ್ಯ ಉಪ ಆಯುಕ್ತರು ((ಆಡಳಿತ) ರವರ ಮಾಹಿಗಾಗಿ ಸಲ್ಲಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ದಕ್ಷಿಣ) ರವರ ಮಾಹಿಗಾಗಿ ಸಲ್ಲಿಸಿದೆ.
6. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
8. ಕಛೇರಿ ಪ್ರತಿ.